ಹಂಗೆ ಮರಿಬೇಡ. ಒಂದು ವರ್ಷದಲ್ಲಿ ಒಳ್ಳೆಯ ಗಂಡ ಸಿಗ್ತಾನೆ. ನೆನಪಿರಲಿ ವಯಸ್ಸು ಇಪ್ಪತ್ತಾರು'... ಸಾಲದ್ದಕ್ಕೆ ಈ ಕೇರಿ ಹನುಮಕ್ಕ, ಮೊಸರಿನ ಸೀತಮ್ಮ ಇವರು ಕೂಡಾ,'ಹಂಗಲ್ಲ ಮಗ, ತಂದೆ-ತಾಯಿಗೆ ಮಕ್ಕಳು ಭಾರ ಅಲ್ಲ. ಆದರೂ ಒಂದು ವಯಸ್ಸಿನ್ಯಾಗ ಏನಾಗಬೇಕೊ ಅದು ಆದ್ರೆನೇ ಚೆಂದ. ಹೆಣ್ಣು ಎಷ್ಟೇ ಆದರೂ ಬೇರೆಯವರ ಮನೆ ಸೇರಲೇಬೇಕು. ಅವಳು ಡಿ.ಸಿ.ಯಾಗಿದ್ರೂ, ಮುಖ್ಯಮಂತ್ರಿಯಾಗಿದ್ರೂ ಅಡುಗೆ ಕಲಿಯಲೇಬೇಕು, ಮದುವೆ ಆಗಬೇಕು ಅಲ್ವಾ. ಅದ್ಕೆ ಬೇಗ ಮದುವೆಯಾಗು'... ಅಲ್ಲಿಗೆ ಬಂದ ಬೆಳಕಿನ ಕಿಡಿಗಳು ತಮ್ಮ ಕೆಲಸ ಆಯಿತೆಂದು ತಮ್ಮೂರ ದಾರಿಯ ಹಿಡಿದವು.

ಈ ಹೃದಯ ಒಂದು, ಸುಮ್ಮನೇ ಚಾಕು ಬಿದ್ದ ನೆಪಕ್ಕೆ ದಕ್ಕುತ್ತದೆಯೋ, ಕತ್ತರಿಸಿ ಹೋಗುತ್ತದೆಯೋ ಮಣ್ಣಂಗಟ್ಟಿ ಇನ್ನೂ ಇಪ್ಪತ್ನಾಲ್ಕು ಗಂಟೆಗಳ ಕಾಲ ಪಯಣಿಸುವ ಹಾದಿ ಇನ್ನೂ ಅದ್ಯಾವ ನೆನಪುಗಳನ್ನು ಮೆಲುಕು ಹಾಕಿಸುತ್ತದೆಯೋ..ಎನ್ನುತ್ತ ಕಿಟಕಿ ಕಡೆ ನೋಡಿದಳು.

ಈಗ ಮದುವೆ ಆಗದಿದ್ದರೂ ಹುಡುಗ-ಹುಡುಗ, ಹುಡುಗಿ-ಹುಡುಗಿ ಒಟ್ಟಿಗೆ ಸಹಜೀವನ ನಡೆಸಬಹುದು ಯಾರು ಯಾರ ಜೊತೆಯಾದರೂ ಒಟ್ಟಿಗೆ ಇರಬಹುದು ಎಂದು ಸುಪ್ರೀಂಕೋರ್ಟ್ ತೀರ್ಮಾನ ಕೊಟ್ಟಿದೆ. ಅಲ್ಲಿ ಸಂಗಾತಿ ಕೂಗಾಡುವ ಚಾನ್ಸಿಲ್ಲ. ಇಲ್ಲಿ ಅನೈತಿಕ ಸಂಬಂಧವಿದೆ ಅಂತ ಕೇಸು ಹಾಕುವ ಹಾಗಿಲ್ಲ. ಸುಪ್ರೀಂಕೋರ್ಟ್ ತೀರ್ಪುಕೊಟ್ಟಿದೆ. ಮದುವೆ ಆಗಿದ್ರೂ ಬೇರೆಯವರ ಜೊತೆ ಸಂಬಂಧಗಳನ್ನು ಇಟ್ಟುಕೊಳ್ಳಬಹುದಾ? ಅವು ಅನೈತಿಕ ಸಂಬಂಧಗಳು ಆಗುವುದಿಲ್ಲವಾ... ಎಂದು ಜನ ಮಾತನಾಡುವ ಮಾತು ಕಿವಿಗೆ ಬಿದ್ದಾಗ "ಲಿವಿಂಗ್ ಟುಗೆದರ್"ನಲ್ಲಿ ಹುಟ್ಟುವ ಸಂಬಂಧಗಳ ಕಥೆ ಏನು? ಇಂತಹ ತೀರ್ಪುಗಳು ಯಾರ ಪರವಾದದ್ದು? ಲಾಭ ಯಾರಿಗೆ? ಹೆಣ್ಣು ಮಕ್ಕಳಿಗಂತೂ ಲಾಭದ ಮಾತು ಬರುವುದೇ ಇಲ್ಲ. ಕಣ್ಣಿನ ಮುಂದೆ ಥಟ್ಟನೆ ಅಸ್ಪಷ್ಟಚಿತ್ರ ಮೂಡಿತು. 'ನಿಮ್ ಬದುಕು ಇಷ್ಟೇಯಾ. ಕಾನೂನು ರೂಪಿಸೋದು ಅವರೇ ಕಾನೂನು ಮಾಡೋದು ಅವರೆಯಾ... ನಿಮ್ ಲಾಭ-ನಷ್ಟ, ಕಷ್ಟ-ಸುಖ ಕೇಳೊಕೆ ಯಾರು ಬರಲ್ಲ. ನೀವೆ ದಾರಿ ಹುಡುಕಿಕೊಳ್ಳಬೇಕು. ಬ್ಯಾಡ ಅಂದರೆ ಗಂಡ ಆದವನು ಎಷ್ಟೇ ಜನ ಹೆಂಡತಿರನ್ನ ಮಡಗಿಕೊಂಡರೂ ನೋಡ್ಕೊಂಡು ಸುಮ್ನಿರಬೇಕು. ಹೊಸ ಕಾನೂನುಗಳು ಬರೋದಕ್ಕಿಂತ ಮುಂಚೆ ರಾಜರೆಲ್ಲಾ ಮಾಡಿದ್ದು ಹಿಂಗೇನಾ? ಇತಿಹಾಸ ಮರುಕಳಿಸುತ್ತಿದೆಯಾ? ಸುಖ, ತೃಪ್ತಿ ಆರಾಮದಾಯಕ ಜೀವನ, ಇವು ಹೆಣ್ಣು ಮಕ್ಕಳಿಗೆ ಸಿಗುವುದಿಲ್ಲವೇ? ಗಂಡಿನಿಂದ ಹೆಂಡತಿಗೂ ಸಿಗದಿದ್ದರೆ ಹೆಂಡತಿಗೆ ಈ ಅವಕಾಶಗಳನ್ನು ಕೊಟ್ಟಿದ್ದರೂ ಅವಳೇನಾದರೂ ಇಂತಹ ಸಾಹಸಕ್ಕೆ ಕೈ ಹಾಕಿದರೆ ಎಲಿಜಬೆತ್ ಟೈಲರ್‌ನಂತೆ, ದ್ರೌಪದಿಯಂತೆ, ಇನ್ನೊಬ್ಬ ಗಂಡನ ಜೊತೆ ಮದುವೆಯಾಗಬೇಕಂತೆ. ಎರಡನೇ ಅಥವಾ ಮೂರು-ನಾಲ್ಕನೇ ಹೆಂಡತಿಯ ಸ್ಥಾನ ಪಡೆದು ಅನಿವಾರ್ಯವಾಗಿ ಬದುಕಬೇಕಾಗಿದೆ. ಹೆಮ್ಮೆ ಪಡಬೇಕೆ? ಗೊತ್ತಿಲ್ಲದ ಯೋಚನೆ ಸದ್ದಿಲ್ಲದೇ ಸುಳಿದಾಡಿದ ವಾಸನೆ ಈಗ ಮತ್ತೆ ಧುತ್ತನೆ ಮೂಗಿಗೆ ಬಡಿಯಲಿಲ್ಲ. ಆದರೆ ಬುದ್ಧಿ, ಮನಸ್ಸಿಗೂ ಬಡಿಯಿತು.

ಇದ್ಯಾವ ಮಾಯೆ, ಕಹಿಯೋ ಸಿಹಿಯೋ ಅವಳ ಪಾಲಿಗೆ ಕೊಡಲು ಕಾಯುತ್ತಿದೆ. ಟ್ರೇನ್ ನಿಂತಿದ್ದೆ ತಡ ನನ್ನೆಡೆಗೆ ಬಂದ ಅವನ ಕಂಡು ಕ್ಷಣ ಅವಾಕ್ಕಾದೆ. ಕಣ್ಣುಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಕಾಲುಗಳು ಕೆಳಗಿಳಿಯಲು ಪ್ರಯತ್ನಿಸುತ್ತಿದ್ದವು. ಐದು ವರ್ಷದ ಹಿಂದೆ ಕಾರಣವೇ ಹೇಳದೆ ದೂರಾದವನು, ಹುಟ್ಟಿದ ನೆಲವನ್ನು ಮರೆತು ಇವನೇ ಎಲ್ಲಾ ಎನ್ನುವ ರೀತಿಗೆ ಕರೆದೊಯ್ದ ಆ ಬಂಧನ ಊರನ್ನು ಬಿಟ್ಟ ಹೊಸತರಲ್ಲಿ ದಿನಕ್ಕೆ ನಾಲ್ಕು ಬಾರಿ ಅಮ್ಮನ ಜೊತೆ ಮಾತನಾಡುತ್ತಿದ್ದ ನಾನು ವಾರಕ್ಕೊಮ್ಮೆ ಮಾತನಾಡಲು ಆಗದಿದ್ದ ಕ್ಷಣಗಳವು. ದೆಹಲಿಯಲ್ಲಿ ಐಐಟಿ ಮಾಡಲು ಬಂದ ದಿನಗಳವು. ನನ್ನ ಭವಿಷ್ಯವನ್ನು ಕಂಡುಕೊಳ್ಳಲು ಬಂದವಳಿಗೆ ಬದುಕನ್ನೇ ಕಟ್ಟಿಕೊಡಲು ಹೋಗುವಷ್ಟು ಸಿದ್ಧವಾಗಿತ್ತು ಕಾಲ. ಇದಕ್ಕೆ ಅವನ ಪ್ರೀತಿಯೋ ಕಾಳಜಿಯೋ ಗೊತ್ತಿಲ್ಲ. ಅವನಿಗೂ ಅಷ್ಟೇ, ಅವಳು ಎಲ್ಲವೂ ಆಗಿದ್ದಳು, ಈ ಕ್ಷಣಕ್ಕೆ ಅವಳ ಮುಂದೆ ನಿಂತಿರುವ ಅವನ ಪಯಣ ಯಾವ ದಿಕ್ಕಿನೆಡೆಗೆ ಗೊತ್ತಿಲ್ಲ, ಅವಳಿಗೋಸ್ಕರ ಅವನು ಕನ್ನಡ ಕಲಿತ, ಅವನಿಗೋಸ್ಕರ ಅವಳು ಹಿಂದಿ ಕಲಿತಳು. ಮಾತೃಭಾಷೆ ಇಬ್ಬರಿಗೂ ಆಪ್ತತೆಯ ಭಾವಕೊಟ್ಟಿತು. ಛೇ ಈ ಕ್ಷಣ ಯಾಕಾದರೂ ಎದುರಾಯ್ತೋ ಟ್ರೈನ್ ಹತ್ತುವಾಗಾಗಲೇ ಬಡಿದ ವಾಸನೆ, ನಿದ್ದೆಯಿಲ್ಲದೆ ಬಂದ ಚಿಂತೆಗಳು ವಯಸ್ಸು